## ಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆಯ ನಡಾವಳಿಗಳು.

ದಿನಾಂಕ: 11.07.2024 ರಂದು ಮುಂಜಾನೆ 11.00 ಗಂಟೆಗೆ ರಾಯಚೂರು ವಿಶ್ವವಿದ್ಯಾಲಯದ ಆಡಳಿತ ಕಚೇರಿಯಲ್ಲಿ ನಡೆದ ಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆಯ ನಡಾವಳಿಗಳು.

### ಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರು:

1. ಪ್ರೊ. ಹರೀಶ ರಾಮಸ್ವಾಮಿ, ಮಾನ್ಯ ಕುಲಪತಿಗಳು – ಅಧ್ಯಕ್ಷರು
2. ಪ್ರೊ. ಪಿ. ಭಾಸ್ಕರ್ – ಸದಸ್ಯರು
3. ಡಾ. ಎ.ಆರ್. ಪುರವಂತ, – ಸದಸ್ಯರು
4. ಶ್ರೀ. ಶಿವಪ್ರಸಾದ ರಾವ್ – ಸದಸ್ಯರು
5. ಶ್ರೀ. ಎನ್. ಸತೀಶ, – ಸದಸ್ಯರು
6. ಶ್ರೀ. ಕಿಶನ್ ರಾಥೋಡ – ಸದಸ್ಯರು
7. ಡಾ. ಮಲ್ಲಿಕಾರ್ಜುನ ಎಂ. ಕುಲಕರ್ಣಿ, – ಸದಸ್ಯರು
8. ಶ್ರೀ. ಮೊಹ್ಮದ್ ಮುಜಾಕೀರ್ ಅಲಿ, – ಸದಸ್ಯರು
9. ಪ್ರೊ. ಯರಿಸ್ವಾಮಿ, ಕುಲಸಚಿವರು (ಮೌಲ್ಯಮಾಪನ) – ಸದಸ್ಯರು
10. ಡಾ. ರಾಘವೇಂದ್ರ ಫತ್ತೇಪೂರು, ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ – ಸದಸ್ಯರು
11. ಡಾ. ಜಿ.ಎಸ್. ಬಿರಾದಾರ, ಗ್ರಂಥಪಾಲಕರು – ಸದಸ್ಯರು
12. ಪ್ರೊ. ವಿಶ್ವನಾಥ ಎಂ., ಕುಲಸಚಿವರು – ಸದಸ್ಯ ಕಾರ್ಯದರ್ಶಿಗಳು

ಮೊದಲನೇಯದಾಗಿ ಕುಲಸಚಿವರು ಸಭಾ ಅಧ್ಯಕ್ಷರಾದ ಮಾನ್ಯ ಕುಲಪತಿಗಳನ್ನು ಹಾಗೂ ಸಭೆಗೆ ಆಗಮಿಸಿದ ವಿದ್ಯಾವಿಷಯಕ ಪರಿಷತ್ ಸದಸ್ಯರುಗಳನ್ನು ಸ್ವಾಗತಿಸಿ, ಸಭೆ ನಡೆಸಿಕೊಂಡು ಹೋಗಲು ಮಾನ್ಯ ಕುಲಪತಿಗಳಲ್ಲಿ ವಿನಂತಿಸುವದರೊಂದಿಗೆ ಸಭೆಯು ಪ್ರಾರಂಭವಾಗುತ್ತದೆ.

| ಕಲಂ/ ಐಟಂ | ವಿಷಯ | ವಿದ್ಯಾವಿಷಯಕ ಪರಿಷತ್‌ನ ನಿರ್ಣಯ |
|---|---|---|
| 1 | ದಿನಾಂಕ: 27.12.2023 ರಂದು ಜರುಗಿದ ಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆ ಮತ್ತು ದಿನಾಂಕ: 15.06.2024 ರಂದು ಜರುಗಿದ ವಿಶೇಷ ವಿದ್ಯಾವಿಷಯಕ ಪರಿಷತ್ (ಆನ್‌ಲೈನ್) ಸಭೆಯ ನಡವಳಿಗಳನ್ನು ದೃಢೀಕರಿಸುವ ಕುರಿತು. | ದಿನಾಂಕ: 27.12.2023 ರಂದು ಜರುಗಿದ ಸಾಮಾನ್ಯ ವಿದ್ಯಾವಿಷಯಕ ಪರಿಷತ್ ಸಭೆ ಮತ್ತು ದಿನಾಂಕ: 15.06.2024 ರಂದು ಜರುಗಿದ ವಿಶೇಷ ವಿದ್ಯಾವಿಷಯಕ ಪರಿಷತ್ (ಆನ್‌ಲೈನ್) ಸಭೆಯ ನಡಾವಳಿಗಳನ್ನು ದೃಢೀಕರಿಸಲಾಯಿತು. |
| 2 | 2024-25 ನೇ ಸಾಲಿಗೆ ಸ್ಥಳೀಯ ತನಿಖಾ ಸಮಿತಿಯ (LIC) ವರದಿಯ ಪ್ರಕಾರ ಕಾಲೇಜುಗಳಿಗೆ ಸಂಯೋಜನಾ ಮುಂದುವರಿಕೆ ಮತ್ತು ಪ್ರವೇಶ ಮಿತಿ ಹೆಚ್ಚಳ ಕುರಿತು ಚರ್ಚೆ. | ರಾಯಚೂರು ವಿಶ್ವವಿದ್ಯಾಲಯದ 2024-25ನೇ ಶೈಕ್ಷಣಿಕ ಸಾಲಿನ ಸಂಯೋಜನೆಗಾಗಿ (For Affiliation) ಸ್ನಾತಕ, ಸ್ನಾತಕೋತ್ತರ ಹಾಗೂ ಸ್ನಾತಕೋತ್ತರ ಡಿಪ್ಲೋಮಾ ಕೋರ್ಸುಗಳ ಹೊಸ ಕಾಲೇಜು, ಹೊಸ ವಿಷಯ, ಹೊಸ ಕೋರ್ಸ್ ಪ್ರವೇಶ ಮಿತಿ ಹೆಚ್ಚಳ ಮಂಜೂರಾತಿಗಾಗಿ 190 ಕಾಲೇಜುಗಳು ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸಿದ್ದವು. 2024-25ನೇ ಸಾಲಿಗೆ 2 ಹೊಸ ಕಾಲೇಜುಗಳಿಗೆ ಹಾಗೂ 188 ಕಾಲೇಜುಗಳು ಸಂಯೋಜನೆಯ ವಿವಿಧ ಕಾರ್ಯಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿದ್ದವು. ಅವುಗಳಲ್ಲಿ ಹೊಸ ಕಾಲೇಜು/ಹೊಸ ಪಿಜಿ ಕೋರ್ಸ್/ ಹೊಸ ವಿಷಯ/ಪಿಜಿ |

| | | |
|---|---|---|
| | | BCA/BBA ಕೋರ್ಸ್‌ಗಳಿಗೆ ಪ್ರವೇಶ ಮಿತಿ ಹೆಚ್ಚಳ/ ಪ್ರಥಮ ಬಾರಿ ಶಾಶ್ವತ ಸಂಯೋಜನೆಗೆ 26 ಕಾಲೇಜುಗಳು ಅರ್ಜಿ ಸಲ್ಲಿಸಿದ್ದವು. 2024–25ನೇ ಸಾಲಿಗೆ ಸಲ್ಲಿಸಿದ್ದ ಸಂಯೋಜನಾ ಅರ್ಜಿಗಳಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಬೇಕಾಗಬಹುದುದಾದ 26 ಕಾಲೇಜುಗಳ ಅರ್ಜಿಗಳನ್ನು ಪ್ರಥಮ ಹಂತದಲ್ಲಿ ಅಂದರೆ 11.06.2024 ರಿಂದ 12.06.2024 ರವರೆಗೆ LIC ತನಿಖೆ ಕೈಗೊಂಡು ದಿನಾಂಕ: 15.06.2024 ರಂದು ಆನ್‌ಲೈನ್ ಮೂಲಕ ನಡೆದ ವಿದ್ಯಾವಿಷಯಕ ಪರಿಷತ್ ಹಾಗೂ ಸಿಂಡಿಕೇಟ್ ಸಭೆಯಲ್ಲಿ ವರದಿ ಮಂಡನೆ ಮಾಡಿದ ನಂತರ ನಿಯಮಾವಳಿಗಳ ಪ್ರಕಾರ 17 ಕಾಲೇಜುಗಳ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ಸಭೆ ನಿರ್ಧರಿಸಿತು. ಇನ್ನುಳಿದ 164 ಕಾಲೇಜುಗಳಿಗೆ 2024–25ನೇ ಸಾಲಿಗೆ ಸಂಯೋಜನಾ ಮುಂದುವರಿಕೆ ಮತ್ತು ವಿಶ್ವವಿದ್ಯಾಲಯದ ಹಂತದಲ್ಲೇ ನಿರ್ಧರಿಸಬಹುದಾದ BA/B.Com ಕೋರ್ಸ್‌ಗಳಿಗೆ B.Com ಒಂದು ಡಿವಿಜನ್ ಹೆಚ್ಚುವರಿ ಪ್ರವೇಶಕ್ಕೆ ಅರ್ಜಿ ಸಲ್ಲಿಸಿರುವ ಕಾರಣ ಎರಡನೇ ಹಂತದಲ್ಲಿ ಸದರಿ ಕಾಲೇಜುಗಳಿಗೆ ದಿನಾಂಕ:21.06.2024 ರಿಂದ 28.06.2024ರ ಅವಧಿಯಲ್ಲಿ LIC ತಂಡಗಳು ಭೇಟಿ ನೀಡಿ ವಿಶ್ವವಿದ್ಯಾಲಯಕ್ಕೆ UUCMS ಮುಖಾಂತರ ವರದಿ ಸಲ್ಲಿಸಲಾಗಿತ್ತು. ನಂತರ UUCMS ಮುಖಾಂತರ Score Card generation ಮಾಡಲಾಯಿತು ಮತ್ತು LIC ತಂಡಗಳು ಸಲ್ಲಿಕೆ ಮಾಡಿದ ಶಿಫಾರಸ್ಸುಗಳನ್ನು ಚರ್ಚೆಗೆ ತೆಗೆದುಕೊಳ್ಳಲಾಯಿತು. ಕಾಲೇಜುಗಳು ಪಡೆದುಕೊಂಡಿರುವ Affiliation Score ನ್ನು ಆಧರಿಸಿ ಈ ಕೆಳಗಿನ ಮಾಹಿತಿಯನ್ನು ಸಭೆಯ ಮುಂದೆ ಮಂಡಿಸಲಾಯಿತು. ಹಾಗೂ ವರದಿಯನ್ನು ಕಾಲೇಜು ಅಭಿವೃದ್ಧಿ ಮಂಡಳಿ ನಿರ್ದೇಶಕರಾದ ಡಾ. ರಾಘವೇಂದ್ರ ಫತ್ತೇಪೂರ ಇವರು ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಮಂಡಿಸಿದರು. |

| **Affiliation Score “X” in %** | **No. of Colleges** | **Cumulative Total** |
|---|---|---|
| X< 30 | 8 | 8 |
| 30<X<35 | 4 | 12 |
| 35<X<40 | 17 | 29 |
| 40<X<45 | 13 | 42 |
| 45<X<50 | 29 | 71 |
| 50<X<60 | 45 | 116 |
| 60<X<70 | 35 | 151 |
| X<70 | 13 | 164 |
| **Total** | **164** | |

| | | |
|---|---|---|
| | | ಕರ್ನಾಟಕ ಸರ್ಕಾರದ ನಿಯಮಾವಳಿಯ ಪ್ರಕಾರ ಸಂಯೋಜನಾ ಮುಂದುವರಿಕೆಗೆ ಕನಿಷ್ಠ 45 ಅಂಕಗಳನ್ನು ತೆಗೆದುಕೊಳ್ಳಬೇಕಾಗಿರುತ್ತದೆ. ರಾಯಚೂರು ವಿಶ್ವವಿದ್ಯಾಲಯ ಹೊಸದಾಗಿ ಅಸ್ತಿತ್ವಕ್ಕೆ ಬಂದಿರುವ ಹಿನ್ನಲೆಯಲ್ಲಿ ಮತ್ತು ಕಾಲೇಜುಗಳು ತಮ್ಮ ಶೈಕ್ಷಣಿಕ ವ್ಯವಸ್ಥೆಯನ್ನು ಸುಧಾರಿಸಿಕೊಳ್ಳುವ ಕ್ರಮವಾಗಿ ವಿಶ್ವವಿದ್ಯಾಲಯದ ಸಿಂಡಿಕೇಟ್ 2022–23ನೇ ಸಾಲಿಗೆ ಕನಿಷ್ಠ 30 ಅಂಕಗಳನ್ನು ಮತ್ತು 2023–24ನೇ ಸಾಲಿಗೆ ಕನಿಷ್ಠ 40 ಅಂಕಗಳನ್ನು ಪಡೆದುಕೊಂಡ ಕಾಲೇಜುಗಳಿಗೆ ಸಂಯೋಜನೆ ಮುಂದುವರಿಕೆಗೆ ನಿರ್ಣಯ ಕೈಗೊಂಡಿತ್ತು. 2024–25ನೇ ಸಾಲಿಗೆ ಈ ಮೇಲೆ ತಿಳಿಸಿದ ಮಾಹಿತಿಯ ಆಧಾರದ ಮೇಲೆ ವಿಸ್ತೃತ ಚರ್ಚೆಯ ನಂತರ ಈ ವರದಿಯನ್ನು ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಕುಲಂಕೂಷವಾಗಿ ಚರ್ಚಿಸಿ, ಸರ್ವಾನುಮತದಿಂದ ಸಮ್ಮತಿಸಿ 45 ಅಂಕಗಳಿಗಿಂತ ಕಡಿಮೆ ಪಡೆದಿರುವ ಕಾಲೇಜುಗಳಿಗೆ ಅವರ ಸಂಯೋಜನೆಯನ್ನು ಹಿಂಪಡೆಯಬಾರದೇಕೆ ಎಂಬ Showcause ನೋಟಿಸ್ ನೀಡುವ ಬಗ್ಗೆ ತಿರ್ಮಾನಿಸಿ ಅದನ್ನು ಮುಂದಿನ ಕ್ರಮಕ್ಕಾಗಿ ಸಿಂಡಿಕೇಟ್ ಸಭೆಗೆ ಕಳುಹಿಸಲು ಅನುಮೋದಿಸಲಾಯಿತು.<br><br>ಮೊದಲನೇ ಮತ್ತು ಎರಡನೇ ಹಂತದ LIC ತನಿಖೆಯಲ್ಲಿ 45 ಕ್ಕಿಂತ ಕಡಿಮೆ ಸಂಯೋಜನಾ ಅಂಕಗಳಿಸಿದ ಅನುಕ್ರಮವಾಗಿ 6 ಕಾಲೇಜುಗಳು ಮತ್ತು 42 ಕಾಲೇಜುಗಳು ಅಂದರೆ ಒಟ್ಟು 48 ಕಾಲೇಜುಗಳು 45ಕ್ಕಿಂತ ಕಡಿಮೆ ಅಂಕಗಳಿಸಿರುವುದು ಸಭೆ ಗಮನಿಸಿ ಶೈಕ್ಷಣಿಕ ಗುಣಮಟ್ಟ ಕಾಯ್ದುಕೊಳ್ಳುವ ದೃಷ್ಟಿಯಿಂದ 2024–25ನೇ ಶೈಕ್ಷಣಿಕ ಸಾಲಿನ ಸಂಯೋಜನೆ ಪ್ರಕ್ರಿಯೆಯಲ್ಲಿ 45 ಕ್ಕಿಂತ ಕಡಿಮೆ ಸಂಯೋಜನಾ ಅಂಕ ಗಳಿಸಿದ ಕಾಲೇಜುಗಳ ಸಂಯೋಜನೆಯನ್ನು ರಾಯಚೂರು ವಿಶ್ವವಿದ್ಯಾಲಯ ಏಕೆ ಹಿಂಪಡೆಯಬಾರದು ಎಂದು ಸಂಬಂಧಿಸಿದ ಕಾಲೇಜುಗಳಿಗೆ ನೋಟಿಸು ಜಾರಿ ಮಾಡುವದು ಮತ್ತು ಕಾಲೇಜು ಸದರಿ ನೋಟಿಸ್‌ಗೆ ಏಳು ದಿನಗಳ ಅವಧಿ ಒಳಗಾಗಿ ಲಿಖಿತವಾಗಿ ಕಾಲೇಜಿನ ಪ್ರಾಚಾರ್ಯರು ವಿಶ್ವವಿದ್ಯಾಲಯಕ್ಕೆ ಸೂಕ್ತ ದಾಖಲೆಗಳೊಂದಿಗೆ ವಿವರಣೆಯನ್ನು ನೀಡಲು ಕಾಲಾವಕಾಶವನ್ನು ನೀಡಬೇಕೆಂದು ನಿರ್ಧರಿಸಲಾಯಿತು.<br><br>ಯಾವುದೇ ಕಾಲೇಜು ಸಂಯೋಜನೆಯನ್ನು ಪಡೆದು ನಡೆಸುತ್ತಿರುವ UG/PG/Diploma ದ ಪ್ರತಿ ಕೋರ್ಸ್‌ಗೆ 15 ಕ್ಕಿಂತ ಕಡಿಮೆ ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದಲ್ಲಿ ಅಂತಹ ಕೋರ್ಸ್‌ಗೆ ಪ್ರಥಮ ವರ್ಷಕ್ಕೆ ನೀಡಿದ ಸಂಯೋಜನೆಯನ್ನು ಹಿಂತೆಗೆದುಕೊಳ್ಳುವುದು ಹಾಗೂ ಸರ್ಕಾರದ ಆದೇಶ (ಸಂಖ್ಯೆ ಇಡಿ 384 ಯುಎಸ್‌ಇ 2020 ದಿನಾಂಕ: 18.02.2022)ದಲ್ಲಿ ನಿರ್ದೇಶಿಸಿದಂತೆ ಮೂಲಭೂತ ಸೌಕರ್ಯ, ಭೂಮಿ ಇತ್ಯಾದಿ |

| | | |
|---|---|---|
| | | ಇಲ್ಲದ ಕಾಲೇಜುಗಳಿಗೇ ಈ ಬಗ್ಗೆ ನೋಟಿಸ್ ನೀಡಲು ತೀರ್ಮಾನಿಸಲಾಯಿತು. ಮುಂದುವರೆದು ಪ್ರತಿ ಕೋರ್ಸ್‌ಗೆ 15 ಕ್ಕಿಂತ ಕಡಿಮೆ ವಿದ್ಯಾರ್ಥಿಗಳಿದ್ದಲ್ಲಿ ಅಂತಹ ವಿದ್ಯಾರ್ಥಿಗಳನ್ನು ಕಡ್ಡಾಯವಾಗಿ ಬೇರೆ ಕಾಲೇಜಿಗೆ ವರ್ಗಾಯಿಸಲು ಕ್ರಮಕೈಗೊಳ್ಳಲು ಸಭೆಯಲ್ಲಿ ನಿರ್ಣಯಿಸಲಾಯಿತು. |
| 3 | ರಾಯಚೂರು ವಿಶ್ವವಿದ್ಯಾಲಯದ 2023–24 ಶೈಕ್ಷಣಿಕ ಸಾಲಿನ ಸ್ನಾತಕೋತ್ತರ (PG) ಪದವಿ ಪತ್ಯಕ್ರಮದ OE ಪತ್ರಿಕೆಯನ್ನು ಪರಿಷ್ಕರಿಸುವ ಕುರಿತು ಚರ್ಚೆ. | ರಾಯಚೂರು ವಿಶ್ವವಿದ್ಯಾಲಯದ 2023–24 ಶೈಕ್ಷಣಿಕ ಸಾಲಿನ ಸ್ನಾತಕೋತ್ತರ (PG) ಪದವಿ ಪಠ್ಯಕ್ರಮಗಳಾದ ಕನ್ನಡ, ಇಂಗ್ಲೀಷ, ಉರ್ದು, ಇತಿಹಾಸ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ, ಗಣಕ ವಿಜ್ಞಾನ ಹಾಗೂ ಸಸ್ಯಶಾಸ್ತ್ರ ಒಟ್ಟು 12 ಅಧ್ಯಯನ ವಿಭಾಗದ ಪಠ್ಯಕ್ರಮದಲ್ಲಿ ಅಳವಡಿಸಿದಂತಹ Open Elective ಪತ್ರಿಕೆಗೆ 100 ಅಂಕಗಳನ್ನು ಅಳವಡಿಸಲಾಗಿತ್ತು. ಆದರೆ ರಾಯಚೂರು ವಿಶ್ವವಿದ್ಯಾಲಯದ ಮಾರ್ಗಸೂಚಿಗಳ ಅನುಸಾರ ಏಕರೂಪತೆಯನ್ನು ಕಾಯ್ದುಕೊಳ್ಳವ ದೃಷ್ಟಿಯಿಂದ 12 ಅಧ್ಯಯನ ವಿಭಾಗಗಳಲ್ಲಿ Open Elective ಪತ್ರಿಕೆಯನ್ನು 50 (Formative 40 + Summative 10) ಅಂಕಗಳಿಗೆ ಪರಿಷ್ಕೃತಗೊಳಿಸಿ ಪಠ್ಯಕ್ರಮದ ಅಂಕಗಳ ಹಂಚಿಕೆಯನ್ನು ಬದಲಾವಣೆ ಮಾಡಿ ಅನುಮೋದಿಸಲಾಯಿತು. |
| 4 | ಸ್ನಾತಕೋತ್ತರ (PG) ಪದವಿಯ ಮೌಲ್ಯಮಾಪನದ ಕುರಿತು ಚರ್ಚೆ. | ಸ್ನಾತಕ ಪದವಿಯಲ್ಲಿ Double- ಮೌಲ್ಯಮಾಪನ ಮಾಡಿಸುವುದು ರೂಢಿ. ಆದರೆ 2024–25 ನೇ ಸಾಲಿನಿಂದ ಸ್ನಾತಕೋತ್ತರ ಪದವಿಯ I & III ಸೆಮಿಸ್ಟರ್‌ಗಳಿಗೆ Single- ಮೌಲ್ಯಮಾಪನ ಹಾಗೂ II & IV ಸೆಮಿಸ್ಟರ್‌ಗಳಿಗೆ Double- ಮೌಲ್ಯಮಾಪನ ಮಾಡಿಸಲು ಚಿಂತಿಸಿದ್ದು ಅದರ ಪ್ರಸ್ತಾವನೆಯನ್ನು ವಿದ್ಯಾವಿಷಯಕ ಪರಿಷತ್‌ನಲ್ಲಿ ಮಂಡಿಸಲಾಗಿತ್ತು. ಈ ಹಿನ್ನಲೆಯಲ್ಲಿ ಹಲವಾರು ವಿಶ್ವದ್ಯಾಲಯಗಳಲ್ಲಿ ಈ ಬಗೆಗಿನ ನಿಲವುಗಳನ್ನು ಗಮನಿಸಲು ಬಹಳಷ್ಟು ವಿಶ್ವವಿದ್ಯಾಲಯಗಳಲ್ಲಿ ಈ ಪ್ರಕಾರದ ಮೌಲ್ಯಮಾಪನ ಪದ್ಧತಿಯು ಜಾರಿಯಲ್ಲಿರುವುದು ಕಂಡು ಬಂದಿದೆ ಹಾಗೂ ಈ ರಿತೀಯ ಮೌಲ್ಯಮಾಪನದಿಂದ ಮೌಲ್ಯಮಾಪನದ ಗುಣಮಟ್ಟದಲ್ಲಾಗಲಿ ಅಥವಾ ಪರೀಕ್ಷಾ ಫಲಿತಾಂಶದ ಮೇಲಾಗಲಿ ಯಾವುದೇ ನಕಾರಾತ್ಮಕ ಪರಿಣಾಮ ಕಂಡು ಬಂದಿಲ್ಲ ಅಲ್ಲದೇ ಮೌಲ್ಯಮಾಪನಕ್ಕೆ ವ್ಯಯ ಮಾಡುವ ವೆಚ್ಚವನ್ನು ಸಹ ಉಳಿಸುವುದು. ಈ ರೀತಿಯ ಮೌಲ್ಯಮಾಪನ ವಿಶ್ವವಿದ್ಯಾಲಯಕ್ಕೆ ಅನುಕೂಲವಾಗಿರುತ್ತದೆ. ಆದ್ದರಿಂದ ಈ ಕಾರಣಕ್ಕಾಗಿ I & III ಸೆಮಿಸ್ಟರ್‌ಗಳಿಗೆ Single- ಮೌಲ್ಯಮಾಪನ ಹಾಗೂ II & IV ಸೆಮಿಸ್ಟರ್‌ಗಳಿಗೆ Double- ಮೌಲ್ಯಮಾಪನ ಮಾಡಿಸುವುದು ಸೂಕ್ತವೆಂದು ಕುಲಸಚಿವರು (ಮೌಲ್ಯಮಾಪನ) ಸಭೆಯಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಇದನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು. |

| | | |
|---|---|---|
| 5 | ಅಧ್ಯಕ್ಷರ ಅನುಮತಿಯ ಮೇರೆಗೆ ಇತರೆ ವಿಷಯಗಳು. | 1. ರಾಷ್ಟ್ರೀಯ ಶಿಕ್ಷಣ ನೀತಿ (NEP)ಯನ್ನು ಪರಿಷ್ಕೃತಗೊಳಿಸಿ ಕರ್ನಾಟಕ ರಾಜ್ಯವು ಉನ್ನತ ಶಿಕ್ಷಣ ಪರಿಷತ್ ಹೊರಡಿಸಿದ ಮಾರ್ಗಸೂಚಿ ನಡಾವಳಿಗಳ ಅನ್ವಯ ರಾಯಚೂರು ವಿಶ್ವವಿದ್ಯಾಲಯಕ್ಕೆ 2024–25ನೇ ಸಾಲಿಗೆ ಸ್ನಾತಕ (UG) ಪದವಿಗಳಿಗೆ Revised NEP ಯ ಹೊಸ ಪಠ್ಯಕ್ರಮವನ್ನು 1 ರಿಂದ 6ನೇ ಸೆಮಿಸ್ಟರ್‌ರವರೆಗೆ ತಯಾರಿಸಲು ಅಧ್ಯಯನ ಮಂಡಳಿಯ ಸಭೆಯನ್ನು ಆಯೋಜಿಸಲಾಗಿದ್ದು, ಈ ಅಧ್ಯಯನ ಮಂಡಳಿ ಸಭೆ (BOS) ಯಲ್ಲಿ ಪಠ್ಯಕ್ರಮವನ್ನು ತಯಾರಿಸಲು ಸರ್ವಾನುಮತದಿಂದ ವಿದ್ಯಾವಿಷಯಕ ಪರಿಷತ್ ಸಭೆಯಲ್ಲಿ ಅನುಮೋದನೆಯನ್ನು ನೀಡಲಾಯಿತು.<br><br>2. ವೆಲ್ಸ ಕರ್ನಾಟಕ Partnership Project ಅಡಿಯಲ್ಲಿ ವೇಲ್ಸ ಮೇಟ್ರೋಪಾಲಿಟನ್ ಯುನಿವರ್ಸಿಟಿಗೆ ರಾಯಚೂರು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳನ್ನು ಕಳುಹಿಸಿ ಕೊಡಲು ವಿಶ್ವವಿದ್ಯಾಲಯವು 5 ಲಕ್ಷ ರೂಗಳನ್ನು ಮೀಸಲಿಡುವುದರ ಜೊತೆಗೆ ಅದರ ಮಾದರಿ ಕೋಶಗಳನ್ನು ರಚಿಸುವುದರ ಬಗ್ಗೆ ಸುದೀರ್ಘವಾಗಿ ಚರ್ಚಿಸಿ, ತೀರ್ಮಾನಿಸಲಾಯಿತು.<br><br>3. ಕರ್ನಾಟಕ ಉನ್ನತ ಶಿಕ್ಷಣ ಮತ್ತು ಬ್ರಿಟಿಷ್ ಕೌನ್ಸಿಲ್ ಒಡಗೂಡಿ, ಕನಾಟಕ ಸಾರ್ವಜನಿಕ ವಿಶ್ವವಿದ್ಯಾಲಯಗಳು, ಶೈಕ್ಷಣಿಕ ಶ್ರೇಷ್ಠತೆಯನ್ನು ಪ್ರಚಾರ ಮಾಡುವ ಹಿನ್ನಲೆಯಲ್ಲಿ ಸ್ಕೌಟ್ಸ ಕಾರ್ಯಕ್ರಮದ ಅಡಿಯಲ್ಲಿ ರಾಯಚೂರು ವಿಶ್ವವಿದ್ಯಾಲಯ ಆಯ್ಕೆಯಾಗಿರುವುದನ್ನು ಶ್ಲಾಘೀಸುತ್ತಾ, ಸರ್ಕಾರಿ ಪದವಿ ಕಾಲೇಜುಗಳಲ್ಲಿ ಅಧ್ಯಯನ ಮಾಡುತ್ತಿರುವ 5 ವಿದ್ಯಾರ್ಥಿಗಳಿಗೆ ಯುನೈಟೆಡ್ ಕಿಂಗ್‌ಡಮ್‌ನಲ್ಲಿ 3 ತಿಂಗಳ ಕಾಲ ಅಧ್ಯಯನ ನಡೆಸಲು ಸುಮಾರು 6 ಲಕ್ಷ ರೂಗಳನ್ನು ವಿಶ್ವವಿದ್ಯಾಲಯವು ಮೀಸಲಿಡಲು ತೀರ್ಮಾನಿಸಿ ಹಾಗೂ KSHEC ನೀಡಿರುವ ಆಯ್ಕೆ ಪಟ್ಟಿಯ ವಿಧಾನ ಹಾಗೂ ಮೀಸಲಾತಿಯನ್ನು ನಿಯಮಾನುಸಾರ ಪಾಲಿಸಿ ವಿಶ್ವವಿದ್ಯಾಲಯವು ವಿದ್ಯಾರ್ಥಿಗಳ ಆಯ್ಕೆ ಪ್ರಕ್ರಿಯೆಯನ್ನು ನಡೆಸಲು ಅನುಮೋದಿಸಲಾಯಿತು. |

11/7/24
ಕುಲಸಚಿವರು
ರಾಯಚೂರು ವಿಶ್ವವಿದ್ಯಾಲಯ,
ರಾಯಚೂರು

11.7.2024
ಕುಲಪತಿಗಳು
ರಾಯಚೂರು ವಿಶ್ವವಿದ್ಯಾಲಯ,
ರಾಯಚೂರು